4. ವಿಶೇಷ ಪ್ರಕರಣವೆಂದು ಪರಿಗಣಿಸಿ ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರಿಗೆ BPL ಕಾರ್ಡ್ ನೀಡಲು ಕೋರಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಪತ್ರ ಬರೆಯಲಾಗಿರುತ್ತದೆ.

5. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ದಿನಭತ್ಯೆ ಮತ್ತು ಪ್ರಭಾರ ಭತ್ಯೆ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

6. ಮಿನಿ ಅಂಗನವಾಡಿ ಕೇಂದ್ರಗಳನ್ನು ಮುಖ್ಯ ಅಂಗನವಾಡಿ ಕೇಂದ್ರಗಳನ್ನಾಗಿ ಪರಿವರ್ತಿಸುವ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಪತ್ರ ವ್ಯವಹರಿಸಲಾಗುತ್ತಿದೆ.

7. ಮೇಲ್ವಿಚಾರಕಿಯರ ಹುದ್ದೆಗೆ ಶೇ 40% ಈಗಾಗಲೇ ಬಡ್ತಿ ನೀಡುತ್ತಿದ್ದು, ಹೆಚ್ಚಿನ ಬಡ್ತಿ ನೀಡುವ ಬಗ್ಗೆ ಹಾಗೂ ಆಯ್ಕೆಯಲ್ಲಿ ಪ್ರಾದೇಶಿಕ ಅಸಮತೋಲನೆ ನಿವಾರಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

8. ಬೇಸಿಗೆಯ ರಜೆಯನ್ನು 10 ರಿಂದ 15 ದಿನಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

9. ಗುರುತರವಾದ ಕಾಯಿಲೆಗಳ ಜೊತೆಗೆ ಗರ್ಭಕೋಶ ಸಂಬಂಧಿ ಶಸ್ತ್ರ ಚಿಕಿತ್ಸೆಗೆ ವೈದ್ಯಕೀಯ ವೆಚ್ಚ ನೀಡುವುದರ ಬಗ್ಗೆ ಆದೇಶ ಹೊರಡಿಸಲಾಗಿದೆ.

10. ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನವನ್ನು ಕಾರ್ಯಕರ್ತೆಗೆ ರೂ. 500/– ಹಾಗೂ ಸಹಾಯಕಿಯರಿಗೆ ರೂ. 250/–ನ್ನು ಹೆಚ್ಚಿಸುವ ಬಗ್ಗೆ 2012ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ.

ಈ) ಅರ್ಹ ಬೇಡಿಕೆಗಳನ್ನು ನಿಯಮಾನುಸಾರ ಈಡೇರಿಸಲಾಗುತ್ತದೆ.

ಉ) ಇಲ್ಲ.

ಊ) ಅನ್ವಯಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಗ್ಯಾಸ್ ಸಂಪರ್ಕ ಹೊಂದಿರುವವರು ವಿದ್ಯುತ್ ಮೀಟರ್ ಹಾಗೂ ಪಡಿತರ ಚೀಟಿ ವಿವರ ನೀಡುವ ಬಗ್ಗೆ

211 (263) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಗ್ಯಾಸ್ ಸಂಪರ್ಕ ಹೊಂದಿರುವವರಿಂದ ವಿದ್ಯುತ್ ಮೀಟರ್ ಆರ್.ಆರ್. ಸಂಖ್ಯೆ ಹಾಗೂ ಪಡಿತರ ಚೀಟಿಯ ದಾಖಲೆಗಳನ್ನು ಒದಗಿಸಬೇಕೆಂದು ಸರ್ಕಾರ ಸೂಚಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಜನ ಗ್ಯಾಸ್ ಸಂಪರ್ಕ ಹೊಂದಿರುವವರು ಈ ದಾಖಲಾತಿಗಳನ್ನು ಸಲ್ಲಿಸಿದ್ದಾರೆ;

ಇ) ಈ ದಾಖಲಾತಿಗಳಿಂದ ಆಗುವ ಪ್ರಯೋಜನವೇನು;

ಈ) ಬೆಂಗಳೂರು ನಗರದಲ್ಲಿ ನಕಲಿ ಎ.ಪಿ.ಎಲ್. ಕಾರ್ಡುಗಳನ್ನು ಹೊಂದಿರುವವರನ್ನು ಪತ್ತೆ ಮಾಡಲು ಕೈಗೊಂಡ ಕ್ರಮಗಳೇನು;

ಉ) ಬೆಂಗಳೂರು ನಗರದಲ್ಲಿ ಹೊಸದಾಗಿ ಎ.ಪಿ.ಎಲ್. ಕಾರ್ಡ್‌ಗಳನ್ನು ನೀಡಲಾಗುತ್ತಿದೆಯೇ?

ಕು॥ ಶೋಭಾ ಕರಂದ್ಲಾಜೆ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಹೌದು, ಸೂಚಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ರೀತಿ ಸೂಚಿಸಲಾಗಿದೆ.

ಆ) ದಿನಾಂಕ 22.02.2011ರವರೆಗೆ ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 16,81,473 ಗ್ಯಾಸ್ ಸಂಪರ್ಕ ಹೊಂದಿರುವವರು ಈ ದಾಖಲಾತಿಗಳನ್ನು ಸಲ್ಲಿಸಿದ್ದಾರೆ.

ಜಿಲ್ಲೆ	ಸಂಗ್ರಹಿಸಿದ ಒಟ್ಟು ಆರ್.ಆರ್. ಸಂಖ್ಯೆ
ಬೆಂಗಳೂರು ನಗರ	1,98,905
ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	14,82,568
ಒಟ್ಟು (ಬೆಂಗಳೂರು)	16,81,473
ರಾಜ್ಯದ ಇತರೆ ಜಿಲ್ಲೆಗಳು	26,25,481
ಒಟ್ಟು (ರಾಜ್ಯ)	43,06,954

ಇ) ರಾಜ್ಯದ ಎಲ್ಲಾ ಭಾಗಗಳಲ್ಲೂ ಪಡಿತರ ಚೀಟಿಗಳ ಸಂಖ್ಯೆಗಳನ್ನು ಮತ್ತು ರಿಯಾಯಿತಿ ದರದ ಅನಿಲ ಗ್ರಾಹಕ ಸಂಖ್ಯೆಗಳನ್ನು ಅವುಗಳನ್ನು ಹೊಂದಿರುವವರು ವಾಸಿಸುವ ಮನೆಗಳ ವಿದ್ಯುತ್ ಮೀಟರ್ ಆರ್.ಆರ್. ಸಂಖ್ಯೆಗಳಿಗೆ ಹೊಂದಾಣಿಕೆ ಮಾಡುವುದರಿಂದ, ಒಂದು ಕುಟುಂಬದಲ್ಲಿ ಎಷ್ಟು ಪಡಿತರ ಚೀಟಿಗಳು ಮತ್ತು ಗ್ಯಾಸ್ ಸಂಪರ್ಕಗಳು ಇವೆ ಎಂದು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ವಿದ್ಯುತ್ ಮೀಟರ್ ಆರ್.ಆರ್. ಸಂಖ್ಯೆಯನ್ನು ಯಾರಿಂದಲೂ ಅನಧಿಕೃತವಾಗಿ ಸೃಷ್ಟಿ ಮಾಡಲು ಸಾಧ್ಯವಿಲ್ಲ.

ಈ) ಮೇಲಿನ ಕಂಡಿಕೆಯ ಉತ್ತರವು ಇದನ್ನೂ ಅನ್ವಯಿಸುತ್ತದೆ.

ಉ) ಸದ್ಯಕ್ಕೆ ನೀಡುತ್ತಿಲ್ಲ. ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿದ ನಂತರ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ ಅನುಷ್ಠಾನ ಕುರಿತು

212 (264) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಈ ಯೋಜನೆಯಲ್ಲಿನ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಕಂ.ಇ. 147 ಎಂಎಸ್‌ಟಿ 2007, ದಿನಾಂಕ: 01/02/2007ರಂತೆ ರಾಜ್ಯದಲ್ಲಿ ಜಾರಿಗೆ ತರಲಾಗಿದೆ.

ಆ) ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ ಜನವರಿ 2011ರ ಅಂತ್ಯದವರೆಗೆ ಸುಮಾರು 7,79,880 ಫಲಾನುಭವಿಗಳಿರುತ್ತಾರೆ.

ರಾಜ್ಯದಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನೆ

213 (266) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ;

ಆ) ಈ ಯೋಜನೆಯ ಫಲಾನುಭವಿಗಳನ್ನು ಯಾವ ರೀತಿ ಗುರುತಿಸಲಾಗುವುದು;

ಇ) ಈ ಯೋಜನೆಯಲ್ಲಿ ಒದಗಿಸುವ ಸೌಲಭ್ಯಗಳೇನು;

ಈ) ಈ ಯೋಜನೆಯನ್ನು ರಾಜ್ಯದ ಯಾವ ಯಾವ ಜಿಲ್ಲೆ/ನಗರಗಳಲ್ಲಿ ಅನುಷ್ಠಾನಗೊಳಿಸಲಾಗಿದೆ;